

# ಬೆಳಕಿನ ಬೆಳೆಗಾರ

■ ಗುಡಿಹಳ್ಳಿ ನಾಗರಾಜ
ಚಿತ್ರ: ಸವಿತಾ ಬಿ.ಆರ್.

ಅಂತರರಾಷ್ಟ್ರೀಯ ಮಟ್ಟದ ಬೆಳಕುತಜ್ಞರೆಂದು ದೇಶದ ಹಲವು ರಂಗತಂಡಗಳಿಂದ ಕರೆಸಿಕೊಂಡ ರಾಮಮೂರ್ತಿ, ಸಮಸ್ತ ಕನ್ನಡಿಗರಿಗೆ ಪರಿಚಿತರಾಗಿರುವುದು ಕಡಿಮೆ! ದೇಶದ ಐವತ್ತಕ್ಕೂ ಹೆಚ್ಚು ರಂಗಮಂದಿರಗಳ ಬೆಳಕು, ಧ್ವನಿ ವ್ಯವಸ್ಥೆ ರೂಪಿಸಿದ ವಾಸ್ತುಶಿಲ್ಪಿ ಅವರು. ರಂಗಭೂಮಿಯ ಈ ಬೆಳಕು ತಜ್ಞ ತಮ್ಮ 86ನೇ ವಯಸ್ಸಿನಲ್ಲಿ ಕಳೆದ ಏಪ್ರಿಲ್ 14ರಂದು ನಿಧನರಾದರು. ನಾಟಕದ ಬೆಳಕಿಗೆ ವೈಜ್ಞಾನಿಕ ನಿಖರತೆ ತೋರಿದ 'ಕನ್ನಡದ ರಾಮಮೂರ್ತಿ' ಸಮಸ್ತ ಕನ್ನಡಿಗರ ಗೌರವಕ್ಕೆ ಅರ್ಹರು.